2) ಇಲ್ಲ.

3) ಒಳಾಂಗಣ ಕ್ರೀಡಾಂಗಣ ಮಾಡುವ ಸಾಧ್ಯತೆ ಈ ಮಹಾನಗರದಲ್ಲಿ ಇರುತ್ತದೆ.

ಕೋಲಾರ ಜಿಲ್ಲೆಯ ಆರೋಗ್ಯ ಇಲಾಖೆಯಲ್ಲಿ ಖರೀದಿಗೆ ಸಂಬಂಧವಾಗಿ ನಡೆದಿರುವ ಅವ್ಯವಹಾರ.

368 - ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ವಾರ್ತಾ ಮತ್ತು ಪ್ರಚಾರ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೋಲಾರ ಜಿಲ್ಲೆಯ ಆರೋಗ್ಯ ಇಲಾಖೆಯಲ್ಲಿ ಖರೀದಿ ಸಂಬಂಧವಾಗಿ ನಡೆದಿರುವ ಅವ್ಯವಹಾರಗಳ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗೆ ಬಂದಿದ್ದರೆ ಎಷ್ಟು ಹಣದ ಅವ್ಯವಹಾರ ನಡೆದಿದೆ?

ಇ) ಇದರ ಬಗ್ಗೆ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಎಂ. ಸಿ. ನಾಣಯ್ಯ (ವಾರ್ತಾ ಮತ್ತು ಪ್ರಚಾರ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) ಬಂದಿದೆ.

ಆ) ಮತ್ತು ಇ) ಈ ವ್ಯವಹಾರದ ಸತ್ಯಾಸತ್ಯತೆಯನ್ನು ಕಂಡು ಹಿಡಿಯಲು ಸರ್ಕಾರಿ ಮಟ್ಟದಲ್ಲಿ ಸರ್ಕಾರದ ಕಾರ್ಯದರ್ಶಿ- 2, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇವರ ಅಧ್ಯಕ್ಷತೆಯಲ್ಲಿ ದಿ|| 30-1-96ರ ಸರ್ಕಾರಿ ಆದೇಶದಲ್ಲಿ ಒಂದು ಸಮಿತಿಯನ್ನು ರಚಿಸಲಾಗಿದೆ, ಹಾಗೂ ಎರಡು ತಿಂಗಳ ಒಳಗೆ ವರದಿ ಸಲ್ಲಿಸಬೇಕೆಂದು ತಿಳಿಸಲಾಗಿದೆ.

ರಾಜ್ಯದಲ್ಲಿರುವ ಅನುದಾನ ಮತ್ತು ಅನುದಾನ ರಹಿತ ಕಾಲೇಜುಗಳು.

370 - ಶ್ರೀ ಜೆ.ಎ. ಫರ್ನಾಂಡಿಸ್ (ನಾಮನಿರ್ದೇಶನ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸರ್ಕಾರಿ, ಖಾಸಗಿ ಅನುದಾನಿತ ಹಾಗೂ ಅನುದಾನರಹಿತ ಅಧೀನ ಪದವಿ ಕಾಲೇಜುಗಳ ಒಟ್ಟು ಸಂಖ್ಯೆ ಎಷ್ಟು? (ಕಾಲೇಜುವಾರು ವಿವರಗಳನ್ನು ಒದಗಿಸುವುದು)

ಆ) ಅವುಗಳಲ್ಲಿ ಎಷ್ಟು ವಿದ್ಯಾರ್ಥಿಗಳು ನೋಂದಾಯಿಸಿಕೊಂಡಿದ್ದಾರೆ?

ಇ) ಅಂತಹ ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಕಾಲೇಜುಗಳಿಗೆ ಉಂಟಾದ ಒಟ್ಟಾರೆ ವೆಚ್ಚವೆಷ್ಟು?

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) :

ಅ)	1)	ಸರ್ಕಾರಿ ಕಾಲೇಜುಗಳು	139
	2)	ಅನುದಾನಿತ ಕಾಲೇಜುಗಳು	289
	3)	ಅನುದಾನ ರಹಿತ ಕಾಲೇಜುಗಳು	284
		ಒಟ್ಟು	712
ಆ)	1)	ಸರ್ಕಾರಿ ಕಾಲೇಜುಗಳು	89387
	2)	ಅನುದಾನಿತ ಕಾಲೇಜುಗಳು	35137
	3)	ಅನುದಾನ ರಹಿತ ಕಾಲೇಜುಗಳು	35065

ಇ) ರೂ. 218.71 ಕೋಟಿ (ಯೋಜನೇತರ)
ರೂ. 12.82 ಕೋಟಿ (ಯೋಜನೆ)

ಹುಬ್ಬಳ್ಳಿ ಕೆ.ಎಂ.ಸಿ. "ಕಿಮ್ಸ್" ಸ್ವಾಯತ್ತ ಸಂಸ್ಥೆಯಾದ ನಂತರ ಸರ್ಕಾರದ ನಿಯಂತ್ರಣ.

371 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿಯ ಕೆ.ಎಂ.ಸಿ. "ಕಿಮ್ಸ್" ಅಂತಾ ಸ್ವಾಯತ್ತ ಸಂಸ್ಥೆಯಾಗಿ ಎಂದಿನಿಂದ ಅಸ್ತಿತ್ವಕ್ಕೆ ಬಂದಿದೆ, ಅದರ ವ್ಯಾಪ್ತಿಗಳೇನು, ಅದರ ಮೇಲೆ ಸರ್ಕಾರದಿಂದ ಯಾವ ಪ್ರಕಾರದ ನಿಯಂತ್ರಣವಿರುತ್ತದೆ, ಅಲ್ಲಿರುವ ನೌಕರರ ಸ್ಥಾನಮಾನಗಳೇನು? (ವಿವರಗಳನ್ನು ಒದಗಿಸುವುದು)

ಶ್ರೀ ಎ. ಬಿ. ಪಾಟೀಲ್ (ವೈದ್ಯಕೀಯ ಶಿಕ್ಷಣ ಸಚಿವರು) :

ಅ) ಹುಬ್ಬಳ್ಳಿಯ ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯವನ್ನು ದಿನಾಂಕ 11-11-94ರಲ್ಲಿ ಸ್ವಾಯತ್ತ ಸಂಸ್ಥೆಯಾಗಿ ಪರಿವರ್ತಿಸಿ ಕರ್ನಾಟಕ ವೈದ್ಯಕೀಯ ವಿಜ್ಞಾನ ಸಂಸ್ಥೆ ಎಂದು ಹೆಸರಿಸಲಾಯ್ತು. ಸದರಿ ಸಂಸ್ಥೆಯನ್ನು ದಿನಾಂಕ 6-2-96ರಂದು ನೋಂದಾಯಿಸಲಾಗಿದೆ. ಈಗಾಗಲೇ ಈ ಸಂಸ್ಥಗೆ ನಿರ್ದೇಶಕರನ್ನು ನೇಮಕ ಮಾಡಲಾಗಿದೆ.

ಈ ಸಂಸ್ಥೆಯು ಸರ್ಕಾರದ ನೇರ ನಿಯಂತ್ರಣದಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಸಂಸ್ಥೆಯ ನೀತಿ ನಿರೂಪಣೆಯು ಸರ್ಕಾರದ ಪರಿಶೀಲನೆಯಲ್ಲಿದ್ದು, ನೀತಿ ನಿಯಮಗಳನ್ನು ರೂಪಿಸಿದ ನಂತರ ಸಂಸ್ಥೆಯ ನೌಕರರ ಸ್ಥಾನಮಾನಗಳು ನಿರ್ಧಾರವಾಗುವುವು.

ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿರುವ ಏಡ್ಸ್ ರೋಗಿಗಳ ಸಂಖ್ಯೆ

372- ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ವಾರ್ತಾ ಮತ್ತು ಪ್ರಸಾರ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ - ಧಾರವಾಡ ಮಹಾನಗರದಲ್ಲಿ ಇಲ್ಲಿಯವರೆವಿಗೆ ಪತ್ತೆಯಾಗಿರುವ ಏಡ್ಸ ರೋಗಿಗಳ ಸಂಖ್ಯೆ ಎಷ್ಟು?